# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ ನೋಂದಣಿ ಸಂಖ್ಯೆ : KARBIL / 2005 / 16123 ಡಿಸೆಂಬರ್ - 2014 ಸಂಚಿಕೆ ೧೨


**ಶ್ರೀ ಸಭಾದ ಮುಂದಿನ ಕಾರ್ಯಕ್ರಮಗಳು : ತಾ. 21-12-2014 ವಾರ್ಷಿಕೋತ್ಸವ ❖ ತಾ. 18-01-2015 ಕಿರುಪ್ರವಾಸ**

## ನಾಡಿನ ಅಂದ ಈ ದೀಪಾವಳಿ... ಬಂತು ಸಂತೋಷ ತಾಳಿ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿಯನ್ನು ತಾ. 9-11-2014ನೇ ರವಿವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು. ಮೊದಲು ಶ್ರೀ ಸಭಾದ ಉಪಾಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವರವರು ಹಲವಾರು ಹಿರಿಯ ಸದಸ್ಯರೊಂದಿಗೆ ದೀಪಪ್ರಜ್ವಲನ ಮಾಡಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಕುಮಾರಿ ಐಶ್ವರ್ಯಲಕ್ಷ್ಮೀ, ಸೌಂದರ್ಯಲಕ್ಷ್ಮೀಯವರ ಪ್ರಾರ್ಥನೆಯ ನಂತರ ಶ್ರೀ ಟಿ. ಮೋಹನ ರಾಯರು ತಮ್ಮ ಧಾರ್ಮಿಕ ಉಪನ್ಯಾಸದಲ್ಲಿ ದೀಪಾವಳಿ ಆಚರಣೆಯ ಮಹತ್ವ, ಹಿನ್ನಲೆ ಹಾಗೂ ವಿವಿಧ ರಾಜ್ಯಗಳಲ್ಲಿ ಯಾವ ರೀತಿ ದೀಪಾವಳಿಯನ್ನು ಆಚರಿಸಲಾಗುತ್ತದೆ ಎಂದು ವಿಸ್ತಾರವಾಗಿ ತಿಳಿಸಿದರು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆ ವಿವಿಧ ವಿಭಾಗಗಳಲ್ಲಿ ನಡೆದಾಗ ಹಿರಿಯ-ಕಿರಿಯರೆನ್ನದೆ ಎಲ್ಲರೂ ಉತ್ಸಾಹದಲ್ಲಿ ಪಾಲುಗೊಂಡರು. ನಂತರ ಹಲವಾರು ವಿನೋದಾತ್ಮಕ ಆಟಗಳು ನಡೆದವು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಾರಿ ವಂದನಾರಾಣಿ, ಪುಟಾಣಿ ವಿ. ಜೆ. ಪೂರ್ವಿ ಅತ್ಯುತ್ತಮ ನೃತ್ಯಪ್ರದರ್ಶನ ನೀಡಿದರು. ಶ್ರೀಮತಿ ಉಷಾ ಪ್ರವೀಣ್ ಹಾಡು ಹಾಡಿ ಎಲ್ಲರನ್ನು ಮನರಂಜಿಸಿದರು. ದೀಪಾವಳಿಯ ವಿಶೇಷವಾದ ಸದಸ್ಯರು ಮನೆಯಲ್ಲೇ ತಯಾರಿಸಿದ ಅಡುಗೆಯ ಭೋಜನ, ಸುಡುಮದ್ದು ಪ್ರದರ್ಶನ, ದಾಂಡಿಯಾ ನೃತ್ಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ನಾಗರಾಜ್ ಶರ್ಮ ಮತ್ತು ಶ್ರೀ ಸುರೇಶ ಕಡಬ ವಿನೋದಾತ್ಮಕ ಆಟಗಳನ್ನು ನಡೆಸಿದರೆ ಶ್ರೀಮತಿ ಶೈಲಜಾ ಶ್ರೀಕಾಂತ್ ಕಾರ್ಯಕ್ರಮ ಸಂಯೋಜಿಸಿದರು. ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ರಾಜಪ್ರಸಾದ ಮತ್ತು ಶ್ರೀಮತಿ ವಿಮಲಾ ದಂಪತಿಗಳು ತಮ್ಮ ಮಕ್ಕಳಾದ ಕು। ರಾಧಿಕಾಳ ಉನ್ನತ ಉದ್ಯೋಗ ಹಾಗೂ ಕು। ಚಂದ್ರಿಕಾಳ ಉನ್ನತ ವ್ಯಾಸಂಗದ ಸಂತೋಷ ಹಂಚಿಕೊಳ್ಳಲು ಉತ್ಕೃಷ್ಟ ಐಸ್‌ಕ್ರೀಂನ್ನು ಪ್ರಾಯೋಜಿಸಿದರು. ಶ್ರೀ ಯು.ಕೆ. ಪ್ರವೀಣ್ ಮತ್ತು ಶ್ರೀಮತಿ ಉಷಾ ಪ್ರವೀಣ್‌ರವರು ಬಾಳೆಹಣ್ಣಿನ ರಸಾಯನ, ಸದನದ ಶ್ರೀ ಮೋಹನದಾಸ್ ರಾವ್‌ರವರು ವಿದ್ಯುಚ್ಛಕ್ತಿ ದೀಪಾಲಂಕಾರವನ್ನು ಪ್ರಾಯೋಜಿಸಿ ದೀಪಾವಳಿಯ ಮೆರುಗನ್ನು ಹೆಚ್ಚಿಸಿದರು. ಶ್ರೀ ನಾಗರಾಜ್ ಶರ್ಮರವರು ದೀಪದ ಸುತ್ತ ಆಕರ್ಷಕ ರಂಗೋಲಿ ರಚಿಸಿ ಗಮನಸೆಳೆದರು. ಮನೆಯಲ್ಲಿ ಶುಚಿ-ರುಚಿಯಾದ ಅಡುಗೆ ತಯಾರಿಸಿದ, ಸಹಾಯಧನ ನೀಡಿದ ಹಾಗೂ ಸಹಕರಿಸಿದ ಸರ್ವರಿಗೂ ವಂದನೆ ನೀಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

*ವರದಿ : ಶ್ರೀ ಪಿ. ಶ್ರೀಕಾಂತ್ ರಾವ್*
*ಚಿತ್ರ : ಶ್ರೀ ರಘುವೀರ್ ಪೆರ್ಡೂರು*

### ದೀಪಾವಳಿ ಉತ್ಸವ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ ವಿಜೇತರು

**ಪುರುಷರ ವಿಭಾಗ :**
ಶ್ರೀ ಪ್ರದೀಪ್ ರಾವ್

**ಮಹಿಳಾ ವಿಭಾಗ :**
ಶ್ರೀಮತಿ ಕನಕವಲ್ಲಿ ಹರ್ಷಕುಮಾರ್

**10 ವರ್ಷದ ಮೇಲಿನ ಮಕ್ಕಳ ವಿಭಾಗ :**
ನಿವೇದಿತಾ

**10 ವರ್ಷದ ಕೆಳಗಿನ ಮಕ್ಕಳ ವಿಭಾಗ :**
ಯಶಿಕಾ

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
**ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**

ಸಮಾಜ ಬಾಂಧವರೇ,

## ಶ್ರೀ ಸಭಾದ ವಾರ್ಷಿಕೋತ್ಸವವು
**ತಾರೀಕು 21-12-2014ರ ಆದಿತ್ಯವಾರದಂದು**
**ವಿವಿಧ ಕಾರ್ಯಕ್ರಮ**ಗಳೊಂದಿಗೆ ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**

### ಕಾರ್ಯಕ್ರಮಗಳು

| | |
|---|---|
| ಪೂರ್ವಾಹ್ನ 9-00ರಿಂದ : | **ದೀಪ ಪ್ರಜ್ವಲನ ಕಾರ್ಯಕ್ರಮ**<br>**ಶ್ರೀ ಸಿ. ಎಸ್. ರಾವ್**<br>ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ<br>**ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ** |
| ಪೂರ್ವಾಹ್ನ 9-30 : | **ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಪ್ರಾರಂಭ** |
| ಪೂರ್ವಾಹ್ನ 10-00ರಿಂದ : | **ಅಡುಗೆ ಸ್ಪರ್ಧೆ – ಮುಕ್ತ ವಿಭಾಗ**<br>**(ಖಾರ ಮತ್ತು ಸಿಹಿ)** |
| 10-00ರಿಂದ 10-30 : | **ಆಶುಭಾಷಣ ಸ್ಪರ್ಧೆ – ಮುಕ್ತ ವಿಭಾಗ** |
| 10-30ರಿಂದ 11-00 : | **ಜಾನಪದ ಗೀತೆ/ಭಾವಗೀತೆ ಸ್ಪರ್ಧೆ**<br>**ವಿಭಾಗ : 16 ವರ್ಷದ ಒಳಗಿನವರಿಗೆ**<br>**16 ವರ್ಷದಿಂದ ಮೇಲ್ಪಟ್ಟವರಿಗೆ** |
| ಪೂರ್ವಾಹ್ನ ಗಂಟೆ 11-00 : | **ಮಹಾಸಭೆ** |
| ಅಪರಾಹ್ನ ಗಂಟೆ 12-30 : | **ಶ್ರೀ ಸತ್ಯನಾರಾಯಣ ಪೂಜಾ ಮಂಗಳಾರತಿ** |
| ಅಪರಾಹ್ನ ಗಂಟೆ 1-00 : | **ಭೋಜನ** |
| ಅಪರಾಹ್ನ ಗಂಟೆ 2-00 : | **ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಬಹುಮಾನ ವಿತರಣೆ** |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ**

| ವಿದ್ಯಾರಣ್ಯ ಕೆ. | ಶ್ರೀಮತಿ ಶೈಲಜಾ ಶ್ರೀಕಾಂತ್ | ಶ್ರೀಮತಿ ಅರುಣಾ ಸೋಮಶೇಖರ್ |
|---|---|---|
| 9686201277 | 9341446255, 2495929 (R) | 9880413243, 2452860 (R) |

***ಸ್ಪರ್ಧೆಗಳಲ್ಲಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಲು ವಿನಂತಿಸುತ್ತೇವೆ.***

## ಬೇಕಾಗಿದ್ದಾರೆ

ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಭವನದ ವ್ಯವಹಾರಗಳನ್ನು ನೋಡಿಕೊಳ್ಳಲು ಮೆನೇಜರ್ ಬೇಕಾಗಿದ್ದಾರೆ. ಯುವಕರಿಗೆ ಮತ್ತು ಸ್ಥಳೀಯರಿಗೆ ಆದ್ಯತೆ.

**ಸಂಪರ್ಕಿಸಿ**

| ಶ್ರೀ ಕರುಣ್ ರಾವ್ ಬೆಳ್ಳೆ | ಶ್ರೀ ಅನಿಲ್ ರಾವ್ ಬಿ.ಎಸ್. | ಶ್ರೀ ಪಿ. ಶ್ರೀಕಾಂತ್ ರಾವ್ |
|---|---|---|
| 9243309120 | 9880037110 | 9343361618 |

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


# ಪಡುಬಿದ್ರಿಗೆ ಹೆಬ್ಬೂರು ಶ್ರೀಗಳ ಆಗಮನ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು ಮತ್ತು ಋಕ್‌ಸಂಹಿತಾ ಯಾಗ ಸಮಿತಿಯು ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ದಿನಾಂಕ 26-10-2014ರಿಂದ 02-11-2014ರ ತನಕ ಋಕ್‌ಸಂಹಿತಾ ಯಾಗವನ್ನು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಜರಗಿದ್ದು, ಯಾಗದ ಉದ್ಘಾಟನೆಗೆ ಆಗಮಿಸಿದ ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠದ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ಪಡುಬಿದ್ರಿಯ ಶ್ರೀ ಐ. ಕೆ. ಸುದರ್ಶನ ಪ್ರಸಾದ ಇವರ "ಶಂಕರ" ಮನೆಗೆ ಚಿತ್ತೈಸಿದರು. ದಿನಾಂಕ 26-10-2014ರ ಪ್ರಾತಃಕಾಲ 6-30ಕ್ಕೆ ಆಗಮಿಸಿದ ಶ್ರೀಗಳನ್ನು ಶ್ರೀ ಐ. ಕೆ. ಕೃತಿವಾಸ ಶರ್ಮ ದಂಪತಿಗಳು ಹಾಗೂ ಶ್ರೀ ಐ. ಕೆ. ಸುದರ್ಶನ ಪ್ರಸಾದ ದಂಪತಿಗಳು ಪೂರ್ಣಕುಂಭ ಕಲಶದೊಂದಿಗೆ ಘಂಟಾನಾದ ಸಹಿತ ಶ್ರೀಗಳನ್ನು ಸ್ವಾಗತಿಸಿ ಧೂಳೀಪೂಜೆಯನ್ನು ನೆರವೇರಿಸಿ ಬರಮಾಡಿಕೊಂಡರು.

ಶ್ರೀ ಸ್ವಾಮಿಗಳು ಯಾಗದ ಸಾಮೂಹಿಕ ಪ್ರಾರ್ಥನೆಯನ್ನು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ನೆರವೇರಿಸಿ, ನೂತನವಾಗಿ ನಿರ್ಮಾಣಗೊಂಡ ತಗಡು ಚಪ್ಪರದ ಉದ್ಘಾಟನೆಯನ್ನು ಮಾಡಿ ನಂತರ ಯಾಗಶಾಲೆಯಲ್ಲಿ ದೀಪಬೆಳಗಿಸಿ ಯಾಗಕ್ಕೆ ಚಾಲನೆಯನ್ನು ನೀಡಿ ನೆರೆದ ಭಕ್ತಾದಿಗಳನ್ನು ಆಶೀರ್ವದಿಸಿದರು.

ಸಂಜೆ ಶ್ರೀ ಐ. ಕೆ. ಸುದರ್ಶನ ಪ್ರಸಾದ ದಂಪತಿಗಳು ಶ್ರೀಗಳ ಪಾದಪೂಜೆಯನ್ನು ಕುಟುಂಬವರ್ಗ ಮತ್ತು ನೆರೆದ ಸಮಾಜ ಬಾಂಧವರೊಂದಿಗೆ ನೆರವೇರಿಸಿ ಆಶೀರ್ವಾದ ಪಡೆದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ವಾರ್ಷಿಕ ಮಹಾಸಭೆ ಹಾಗೂ ವಾರ್ಷಿಕೋತ್ಸವ



ದಿನಾಂಕ 19-10-2014ನೇ ರವಿವಾರದಂದು ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಸುರತ್ಕಲ್ ಗೋವಿಂದದಾಸ ಕಾಲೇಜಿನ ಎದುರಿನ "ಮಾನಸ" ಮನೆಯ ಆವರಣದಲ್ಲಿ (ಸಂಘದ ಉಪಾಧ್ಯಕ್ಷರ ಮನೆ) ನಡೆಯಿತು. ಬೆಳಗ್ಗೆ ಗಂಟೆ 9-00ರಿಂದ ನೋಂದಣಿ, ಉಪಾಹಾರದ ಬಳಿಕ ಸಮಾಜ ಬಾಂಧವರಿಗೆ ಅವರವರ ವಯಸ್ಸಿಗನುಗುಣವಾಗಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. 11-30ಕ್ಕೆ ಸರಿಯಾಗಿ ಸಂಘದ ಮಹಾಸಭೆಯು ನಡೆಯಿತು. ಪ್ರಾರ್ಥನೆಯ ಬಳಿಕ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿಯವರಾದ ಶ್ರೀ ಸುಕುಮಾರ್ ಎಂ. ಯು. ಇವರು ವಾರ್ಷಿಕ ವರದಿಯನ್ನು ವಾಚಿಸಿದುದಲ್ಲದೆ ಕಾರ್ಯಕ್ರಮದ ನಿರೂಪಣೆ ಮಾಡಿದರು. ಕೋಶಾಧಿಕಾರಿಗಳಾದ ಶ್ರೀ ಸಿ. ರಾಘವೇಂದ್ರ ರಾವ್ ಇವರು ಸಂಘದ ಆಯ-ವ್ಯಯ ಪತ್ರ, ಅಂದಾಜು ಆಯ-ವ್ಯಯ ಪತ್ರವನ್ನು ವಾಚಿಸಿದರು. ನಂತರ ಮಹಾಸಭೆಯು ಇದನ್ನು ಅಂಗೀಕರಿಸಿತು. ಸ್ಪರ್ಧೆಯ ನಿರ್ವಹಣೆ ಹಾಗೂ ಪ್ರಾಯೋಜಕತ್ವವನ್ನು ಶ್ರೀ ಪಾಲಚಂದ್ರ ಶರ್ಮ ಹಾಗೂ ಸುಧಾಮಣಿ ದಂಪತಿಗಳು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷರೊಂದಿಗೆ ಶ್ರೀ ವೈ. ವಿ. ರತ್ನಾಕರ ರಾವ್, ಮಂಗಳೂರು, ಸಂಘದ ಕಾರ್ಯದರ್ಶಿಗಳಾದ ಶ್ರೀ ಕರುಣಾಕರ ಬೆಳ್ಳೆ, ಪಡುಬಿದ್ರಿ ಸಂಘದ ಶ್ರೀ ಮೋಹನ್ ರಾವ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ "ಯುವವೇದಿಕೆ" ಹಾಗೂ "ಮಹಿಳಾ ವೇದಿಕೆ"ಯನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ಕೊನೆಗೆ ಸಂಘದ ಸದಸ್ಯರಿಂದ ಹಾಗೂ ಮಕ್ಕಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯಿತು. ಭೋಜನದ ಬಳಿಕ ಕಾರ್ಯಚಟುವಟಿಕೆಯು ಮುಕ್ತಾಯವಾಯಿತು.

## ಶಿವಬ್ರಾಹ್ಮಣ ಸಭಾ (ರಿ.), ಕಾಸರಗೋಡು ಜಿಲ್ಲಾ ಸಮಾವೇಶ



ಭಾರತವು ಇಂದು ಬಾಹ್ಯಾಕಾಶ, ಅಣುವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ವಿಶ್ವದ ಹಲವಾರು ದೇಶಗಳೊಡನೆ ಸ್ಪರ್ಧಿಸಲು ಸಾಧ್ಯವಾಗಿದ್ದರೂ ಮೂಲ ವಿಜ್ಞಾನ ಕ್ಷೇತ್ರದಲ್ಲಿ ಇಂದು ಮುಂದು ವರಿಯಬೇಕಾದ ಅನಿವಾರ್ಯತೆ ಇದೆ. ಇಂದು ನಮ್ಮ ಯುವ ಜನರು ಮೆಡಿಕಲ್, ಇಂಜಿನಿಯರ್ ಎಂದು ಮುನ್ನುಗ್ಗು ತ್ತಿರುವಾಗ ವಿಜ್ಞಾನ ವಿಷಯಗಳಲ್ಲಿ ಆಕರ್ಷಿತರಾಗುವ ಪ್ರತಿಭಾವಂತರ ಕೊರತೆಯಿದೆ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ ಪ್ರೊ| ವಿ. ಆರ್. ರಾವ್ ಅಭಿಪ್ರಾಯಪಟ್ಟರು. ಅವರು ಶಿವಬ್ರಾಹ್ಮಣ ಸಭಾದ 19ನೇ ವಾರ್ಷಿಕ ಸಮಾವೇಶದಲ್ಲಿ ಸಮಾರೋಪ ಭಾಷಣ ಮಾಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕಲಾ ಸಂಘಟಕ ದೇವಾನಂದ ಭಟ್ ಕಲೆ ಮನುಷ್ಯನನ್ನು ಸುಸಂಸ್ಕೃತಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟರು. ರಾಷ್ಟ್ರಪ್ರಶಸ್ತಿ ವಿಜೇತೆ ಅಧ್ಯಾಪಿಕೆ ಸುಲೋಚನ ನಾಗಪ್ಪಯ್ಯ "ಶಿವಗಂಗಾ" ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಗೊಳಿಸಿದರು. ಸಂಘದ ಅಧ್ಯಕ್ಷ ಡಾ. ಸತ್ಯನಾಥ ಅಧ್ಯಕ್ಷತೆ ವಹಿಸಿದರು. ಕೂಡ್ಲು ಎರೆಪಾಡಿ ಶ್ರೀ ವಿಷ್ಣು ಶಾನುಭಾಗ ಅವರಿಗೆ ಸಮಾಜರತ್ನ ಪ್ರಶಸ್ತಿಯನ್ನಿತ್ತು ಗೌರವಿಸಲಾಯಿತು. ಸಮಾಜ ಸೇವಾ ಪ್ರಶಸ್ತಿಯನ್ನು ಶ್ರೀ ವೆಂಕಟೇಶಯ್ಯ ನೀಲಂಗಳ, ಕಲಾ ಪ್ರತಿಭಾ ಪುರಸ್ಕಾರವನ್ನು ಕಲಿಬಾರು ಶ್ರೀ ಕೇಶವ ಭಟ್, ಲಲಿತ ಕಲಾ ಪ್ರಶಸ್ತಿ ಯನ್ನು ಶ್ರೀಮತಿ ನಯನಾರಾಜ್, ಚಿತ್ರಕಲಾ ಪ್ರಶಸ್ತಿ ಕು| ಅಖಿಲಾ ಮೇರ್ಟ ಇವರಿಗೆ ಇತ್ತು ಗೌರವಿಸಲಾಯಿತು. ಹಿರಿಯರಾದ ಶ್ರೀ ವಿಶ್ವನಾಥ ರಾವ್ ಕೆ. ಮತ್ತು ಚಂದ್ರಾವತಿ ಶಾನುಭೋಗ್ ಕೂಡ್ಲು ಇವರನ್ನು ಗೌರವಿಸಲಾಯಿತು. ಸಮಾರಂಭದಲ್ಲಿ ಶ್ರೀಯುತ ಕೆ. ಜಿ. ಶಾನುಭೋಗ್ ಹಾಗೂ ಮಾ. ಅನಿಕೇತನ್ ಅವರನ್ನು ಅಭಿನಂದಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ರಾಂ ಎಲ್ಲಂಗಳ ಬಳಗದವರ ಹಾಸ್ಯಲಹರಿ, ಮಹಿಳಾ ಸಂಘದ ಸದಸ್ಯರಿಂದ ನೃತ್ಯರೂಪಕ, ಮಕ್ಕಳಿಂದ ನೃತ್ಯ ಕಾರ್ಯಕ್ರಮಗಳು ಸಮಾರಂಭಕ್ಕೆ ಮೆರುಗು ತುಂಬಿತು.

ವರದಿ ಮತ್ತು ಚಿತ್ರ : **ಮನೋಹರ ಎ., ಕಾಸರಗೋಡು**


ಪತ್ರಿಕೆಗೆ ಶುಭ ಬಯಸುವ-



**ಶ್ರೀ ಶಾಂತರಾಮ್ ರಾವ್ ಕೆ.**
**ಶ್ರೀಮತಿ ರಮ್ಯ ಎಸ್. ರಾವ್**
**ಶರಣ್ಯ ಎಸ್. ರಾವ್**

ಪತ್ರಿಕೆಗೆ ಶುಭ ಬಯಸುವ-



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

## ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ

**ಕುಡುಪು ಲಕ್ಷ್ಮೀ ಅಮ್ಮ**ನವರು ತಾರೀಕು 24-10-2014ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

❖ ❖ ❖

ಶಿಕ್ಷಣತಜ್ಞ ಹಾಗೂ ಅನೇಕ ಸಂಘ-ಸಂಸ್ಥೆಗಳ ರೂವಾರಿ ನಿವೃತ್ತ ಪ್ರಾಂಶುಪಾಲ **ಐರಬೈಲು ಸುಬ್ರಹ್ಮಣ್ಯ ಜೋಷಿ** (68) ತಾರೀಕು 24-11-2014ರಂದು ಹೃದಯಾಘಾತ ದಿಂದ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

**ಉಡುಪಿ ಚಿಟ್ಪಾಡಿಯ ಶ್ರೀಮತಿ ಸರಸ್ವತಿ** (88) ಯವರು ತಾರೀಕು 12-11-2014ರಂದು ನಿಧನ ಹೊಂದಿದರು. ಅವರು ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್ ಸಹಿತ 3 ಗಂಡು, 5 ಹೆಣ್ಣು ಮಕ್ಕಳು ಹಾಗೂ ಹಲವಾರು ಬಂಧು-ಬಾಂಧವರನ್ನು ಅಗಲಿದ್ದಾರೆ.

❖ ❖ ❖

ಪೊಳಲಿ ನಿವಾಸಿ **ಶ್ರೀಮತಿ ಲೀಲಾವತಿ**ಯವರು ತಾರೀಕು 14-11-2014ರ ಶುಕ್ರವಾರದಂದು ನಿಧನ ಹೊಂದಿದರು. ಇವರು ಪುತ್ರಿ, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ನಟ್ಟೋಜಿ ಶ್ಯಾಂ ಪ್ರಭಾಕರ ರಾವ್ ಮತ್ತು ಶ್ರೀಮತಿ ಶಾಲಿನಿಯವರ ಸುಪುತ್ರ **ಸಂದೀಪ್** ಹಾಗೂ ಶ್ರೀ ನಂಜಯ್ಯ ಹೆಬ್ಬಾರ್ ಮತ್ತು ಶ್ರೀಮತಿ ಸುಪ್ರಭಾರವರ ಸುಪುತ್ರಿ **ಅಂಕಿತ**ರವರ ವಿವಾಹವು ತಾರೀಕು 24-11-2014ರ ಸೋಮವಾರದಂದು **ಕೊಲ್ಲೂರು 'ಶ್ರೀ ಮೂಕಾಂಬಿಕಾ ಸಭಾಭವನ'**ದಲ್ಲಿ ನೆರವೇರಿತು.

## "ಸ್ಥಾನಿಕ ವೃಕ್ಷ" ರಚನೆ : ಸ್ಥಾನಿಕ ಸಮಾಜ ಬಾಂಧವರಲ್ಲಿ ನಿವೇದನೆ

ಸ್ಥಾನಿಕ ಬ್ರಾಹ್ಮಣರು ಸಂಖ್ಯೆಯಲ್ಲಿ ಒಂದು ಸಣ್ಣ ಜನಾಂಗವಾಗಿದ್ದರೂ, ಪ್ರಸ್ತುತ ದೇಶಾದ್ಯಂತ ಅಲ್ಲದೆ ವಿದೇಶಗಳಲ್ಲೂ ಚೆಲ್ಲಿಹೋಗಿರುವುದರಿಂದ ಈ ಜನಾಂಗದ ಒಟ್ಟಾರೆ ವಿವರಗಳನ್ನು ಸಂಗ್ರಹಿಸಿಡುವ ಯಾವುದೇ ದಾಖಲೆ ಲಭ್ಯವಾಗುತ್ತಿಲ್ಲ. ಇತ್ತೀಚೆಗೆ ಎಲ್ಲ ಸ್ತರಗಳಲ್ಲಿ ಗಣಕೀಕರಣ ವ್ಯಾಪಕವಾಗಿ ಬಳಕೆಯಲ್ಲಿ ಬಂದ ಕಾರಣ ಹಾಗೂ ಬಹಳಷ್ಟು ಮಂದಿಗೆ ಗಣಕೀಕರಣ ವಿಭಾಗದಲ್ಲಿ ಅಪಾರವಾಗಿ ಉದ್ಯೋಗಾವಕಾಶ ಲಭಿಸಿರುತ್ತಾ ಇರುವುದರಿಂದ ಸ್ಥಾನಿಕ ಜನಾಂಗದವರು ದೇಶ ವಿದೇಶಗಳಲ್ಲಿ ಪಸರಿಸಿರುತ್ತಾರೆ. ಹಾಗಾಗಿ ಸ್ಥಾನಿಕ ಜನಾಂಗದ ವಿವರಗಳನ್ನು ಒದಗಿಸುವ ಲಿಖಿತ ದಾಖಲೆಯೂ ಕಾಣುತ್ತಿಲ್ಲ. ಪರಸ್ಪರ ತಿಳುವಳಿಕೆ ಹಾಗೂ ಸಂವಹನವೂ ಕೌಟುಂಬಿಕ ನೆಲೆಯಲ್ಲಿ ಕುಟುಂಬದೊಳಗಿನ ಸದಸ್ಯರು ಹಾಗೂ ಸಮೀಪ ಸಂಬಂಧಿಗಳಲ್ಲಿ ಮಾತ್ರ ಸಾಧ್ಯವಾಗಿದೆ. ದೂರದ ಸ್ಥಳಗಳಿಗೆ ವಲಸೆ ಹೋಗಿ ನೆಲೆಸಿರುವ ಸಮಾಜ ಬಾಂಧವರೊಳಗಿನ ಸಂವಹನಕ್ಕೂ ಒಂದು ಮಾಧ್ಯಮ ಇಲ್ಲವಾಗಿದೆ.

ಈಗ ಕಾಲ ತೀವ್ರ ವೇಗದಲ್ಲಿ ಬದಲಾಗುತ್ತಿದೆ. "ಸ್ಥಾನಿಕ ವಂಶವೃಕ್ಷ"ವನ್ನು ಬರೆಯಲು ಕಾಲ ಹತ್ತಿರವಾಗಿದೆ. ಅದು ಸಮಾಜದ ತುರ್ತು ಅಗತ್ಯವೂ ಆಗಿದೆ. ಅಜ್ಜ-ಮುತ್ತಜ್ಜರಿಂದ ಹಿಡಿದು ಮೊಮ್ಮಕ್ಕಳು – ಮರಿಮಕ್ಕಳ ವರೆಗಿನ ಸಾಧ್ಯವಾದಷ್ಟೂ ಆಳ ವಿವರಣೆ/ಬರವಣಿಗೆ ಮಾಡುವ ಅಗತ್ಯ ಹೆಚ್ಚಾಗಿದೆ. ಸ್ಥಾನಿಕ ಸಮಾಜವೇ ಒಂದು ಒಟ್ಟು ಸಮುದಾಯವಾಗಿ ಆ ಸಮುದಾಯದ ವಂಶವೃಕ್ಷ



ಸಿದ್ಧವಾಗಬೇಕಾಗಿದೆ. ಇದು ಇಂದಿನ ಹಾಗೂ ಮುಂದಿನ ಸ್ಥಾನಿಕ ಜನಾಂಗಗಳಿಗೆ ಅತ್ಯುಪಯುಕ್ತ ಮಾರ್ಗದರ್ಶಿ ಯಾಗಲಿದೆ.

ಅದಕ್ಕಾಗಿ ಈ ಯೋಜನೆಯ ಸ್ಪಷ್ಟ ರೂಪುರೇಖೆ ನಿರ್ಮಿಸಲು ಸಹಕರಿಸಿ; ದೇಶದ ನಾನಾ ಕಡೆ ಪಸರಿಸಿರುವ ನಮ್ಮ ಸಮಾಜದ ಆದಷ್ಟು ಹೆಚ್ಚು ಬಂಧು ಬಾಂಧವರನ್ನು ಈ ಯೋಜನೆಯಲ್ಲಿ ತೊಡಗಿಸುವುದು ನಮ್ಮ ಉದ್ದೇಶ ವಾಗಿದೆ. ನೀವೂ ಕೈಜೋಡಿಸಿ. ನಿಮ್ಮ ಸಲಹೆಗಳನ್ನು ನೀಡಿ.

**ಶಂಕರನಾರಾಯಣ ರಾವ್ ಕರ್ವಾಲು**
Flat No. D-301, D-Block
ETA Garden Apartments, Near Binny Mills
Magadi Road, BANGALORE - 560 023
E-mail: sthanikavrakshn@gmail.com
Mobile : 9449958151

## ಮನೆಯೇ ಮಂತ್ರಾಲಯ

ಮಂಗಳೂರಿನ ಶ್ರೀ ಶೇಷಾದ್ರಿಯವರ ಸುಪುತ್ರ ಶ್ರೀ ರಾಜೇಶನು ವಾಮಂಜೂರಿನಲ್ಲಿ ನೂತನವಾಗಿ ನಿರ್ಮಿಸಿರುವ **'ಭ್ರಾಮರಿ'** ಇದರ ಗೃಹಪ್ರವೇಶ ಕಾರ್ಯಕ್ರಮವು ತಾರೀಕು 29-11-2014ರ ಶನಿವಾರದಂದು ನೆರವೇರಿತು.

## ಕಾಡುಪೀರೆ ಬೋಂಡ



**ಬೇಕಾಗುವ ಸಾಮಾನು :**

ಕಾಡುಪೀರೆ 1, ಕಡ್ಲೆಹಿಟ್ಟು 2 ತಟ್ಟೆ, ರುಚಿಗೆ ಉಪ್ಪು, ಮೆಣಸಿನ ಹುಡಿ, ಚೂರು ಇಂಗು, ಕರಿಯಲು ಎಣ್ಣೆ, 2 ಚಮಚ ಅಕ್ಕಿ ಹಿಟ್ಟು.

**ಮಾಡುವ ವಿಧಾನ :** ಹೀರೆಕಾಯಿಯನ್ನು ತೆಳುವಾಗಿ ಕತ್ತರಿಸಿ ಇಟ್ಟುಕೊಳ್ಳಬೇಕು. ನಂತರ ಈ ಸಾಮಾನುಗಳನ್ನು ಸ್ವಲ್ಪ ನೀರು ಹಾಕಿಕೊಂಡು ಕಲಸಬೇಕು. ಬಿಸಿಯಾದ ಎಣ್ಣೆಗೆ ಹೀರೆಕಾಯಿ ತುಂಡುಗಳನ್ನು ಹಿಟ್ಟಿಗೆ ಮುಳುಗಿಸಿ ಹಾಕಿ ಕಾಯಿಸಿದರೆ ರುಚಿಯಾದ ಬೋಂಡ ತಯಾರಾಗುತ್ತದೆ.

***ವತ್ಸಲಾ ಯೋಗೀಶ್ ರಾವ್ ಏಳಿಂಜೆ***




SHARMA ENTERPRISES
KANKANADY, MANGALORE - 575 002
Prop. :
Chethan Sharma
Mob. : 9844187083

Prop. : *Pradeep V. Rao*
M. : 9880093799
9844541917
VYBHAV ENTERPRISES
All Mobile Recharges & DTH Recharges
BALMATTA REAL ESTATE
Contact for Sites, Houses, Rental Houses & Flats and all Documentation
Ground Floor, Dwaraka Complex
Arya Samaja Road, Balmatta, Mangalore - 575 003
E-mail : pradeepvrao55@gmail.com

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


## ಪ್ರೀತಿಯ ಮಾಲತಿ ಅತ್ತಿಗೆಗೆ ಸ್ನೇಹಲತೆಯ ನುಡಿನಮನಗಳು

ಇದೇ ಕಾರ್ತಿಕ ಮಾಸದ ನವಂಬರ್ 11ರ ಪಂಚಮಿಯಂದು ನೀವು ನಮ್ಮನ್ನೆಲ್ಲಾ ಅಗಲಿದಿರಿ. ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿದ್ದ ನಂದಳಿಕೆ ಕೃಷ್ಣರಾಯರು ಮತ್ತು ರಮಾಬಾಯಿಯವರ ಮಗಳಾಗಿದ್ದ ನೀವು ಬೆಳ್ಳೆ ವಸಂತರಾಯರ ಕೈಹಿಡಿದಿರಿ. ಇವರು ಬೆಳ್ಳೆ ವಿಠಲ ರಾವ್ ಮತ್ತು ಪದ್ಮಾವತಿಯವರ ಹಿರೀಮಗ. ಇವರೆಲ್ಲಾ ಬೆಂಗಳೂರಿನ ಸ್ಥಾನಿಕ ಸಂಘಟನೆಗೆ ತನು-ಮನ-ಧನಗಳಿಂದ ದುಡಿದಿದ್ದಾರೆ. ದಿ| ವಿಠಲ ರಾಯರು ನನ್ನ ತಂದೆ ದಿ| ಬೆಳ್ಳೆ ಭವಾನಿರಾಯರ ಅಣ್ಣ ವಸಂತಣ್ಣ ಮಾಲತಿ ಅತ್ತಿಗೆಯ ಅದ್ಧೂರಿಯ ಮದುವೆ ಮಂಗಳೂರಿನ ಮಲ್ಲಿಕಟ್ಟೆಯ ಸಮೀಪ "ಪ್ರಭಾತ" ಮನೆಯಲ್ಲಿ ನಡೆದಿತ್ತು. ಸಿ.ವಿ. ನಾಯಕ್ ಹಾಲ್‌ನ ಎದುರುಗಡೆ ಇರುವ ಹೇಮ ಮಂದಿರ (ನನ್ನ ತಂದೆಯ ಮನೆ)ಯಿಂದ ವಾಲಗದೊಂದಿಗೆ ಬೀದಿಯಲ್ಲೇ ಮೆರವಣಿಗೆ ದಿಬ್ಬಣ ಹೋಗಿತ್ತು. ಗೃಹಪ್ರವೇಶವೂ ಸೆಗಣಿ ಸಾರಿಸಿದ ಮೇಲಂಗಳ, ನಡುಅಂಗಳ, ಕೆಳಅಂಗಳ, ದೊಡ್ಡ ಚಾವಡಿ ಮನೆಯಲ್ಲಿ ಆಡಂಬರವಾಗಿ ನಡೆದಿತ್ತು. ಹಟ್ಟಿ, ಬಚ್ಚಲು, ಹಂಡೆ, ಮುಂಬಾಗಿಲು, ಹಿಂಬಾಗಿಲು, ತೋಟ ಇರುವ ದೊಡ್ಡ ಮನೆ ನಮ್ಮದು. ಮನೆಯವರೇ 50-60 ಜನ ಇರುತ್ತಿದ್ದರು. ನಾನು ಆಗ ಚಿಕ್ಕವಳಿದ್ದರೂ ನೆನಪಿದೆ. ಹೀಗೆ ಲಕ್ಷಣದ ಮಾಲತಿ ಅತ್ತಿಗೆ ನಮ್ಮ ಮನೆ ಹಿರೀಸೊಸೆಯಾದರು. ಆಮೇಲೆ ನಡೆದ ಬಹಳಷ್ಟು ಶುಭ-ಅಶುಭ ಎಲ್ಲಾ ಕಾರ್ಯಗಳಿಗೆ ಅವರು ಬರುತ್ತಿದ್ದರು. ನನ್ನ ಅಮ್ಮನಂತೂ ನಡುಹಾಲ್‌ನಲ್ಲಿ ಚಾಪೆ ಹಾಸಿ ಅವರಿಂದ ದೇವರ ಕೀರ್ತನೆಗಳನ್ನು ಹಾಡಿಸುತ್ತಿದ್ದರು.

ವಸಂತಣ್ಣ NAVY ಸೇರಿ, ಉನ್ನತ ಪದವಿ ಗಳಿಸಿ, ದೇಶ-ವಿದೇಶಕ್ಕೆ ಕುಟುಂಬದೊಂದಿಗೆ ಕೆಲಸದ ಮೇಲೆ ಹೋಗಿ ಕೊನೆಗೆ ಬೆಂಗಳೂರಿನಲ್ಲಿ ನೆಲೆಸಿದರು. ಮೂವರು ಮಕ್ಕಳೂ ವಿದ್ಯಾವಂತರು. ಅಣ್ಣ ಅತ್ತಿಗೆಯದು ಸುಖೀಸಂಸಾರ. ಅವರ ಅತ್ತೆಯಂತೆಯೇ ಮನೆಗೆ ಬಂದವರಿಗೆ ಆದರಾತಿಥ್ಯ. ಅವರು ಕೋಪಿಸಿಕೊಳ್ಳುವುದು, ಇನ್ನೊಬ್ಬರನ್ನು ತೆಗಳುವುದು ಇಲ್ಲವೇ ಇಲ್ಲದ ನಿಧಾನ ಸಮಾಧಾನಿ ಸ್ವಭಾವದವರು. ಮದುವೆ ಮೊದಲೇ ಪದವೀಧರರು. ಕರ್ನಾಟಕ ಸಂಗೀತಪ್ರವೀಣರು. ಹಿಂದಿ ಸಿನೇಮಾಗಳೆಂದರೆ ಅಚ್ಚುಮೆಚ್ಚು. ಹಳೇ, ಹೊಸ ಹಾಡುಗಳನ್ನೆಲ್ಲಾ ಗುಣುಗುಣಿಸುತ್ತಿದ್ದರು. ಹಮ್ಮು ಬಿಮ್ಮು ಇಲ್ಲದೆ ಬಂಧು-ಬಳಗದವರೊಂದಿಗೆ ಬೆರೆತು ಮಾತನಾಡುತ್ತಿದ್ದರು. ಬೇರೆ ಬೇರೆ ಸುಂದರ ತಾಣಗಳನ್ನು ನೋಡುವುದು, ಸಮುದ್ರದಲ್ಲಿ ಆಟ, ಯಾವಾಗಲೂ ನಗುಮುಖದಿಂದ ಇರುವುದು ಇವರ ರೀತಿ. ತನ್ನ ಅಭಿಪ್ರಾಯಗಳನ್ನು ಯಾರ ಮೇಲೂ ಹೇರದೆ ಎಲ್ಲರೊಡನೆ ಸಂತೋಷವಾಗಿ ಕೊನೆತನಕವೂ ಇದ್ದರು. 80 ವರ್ಷದ ಪೂರ್ಣಾಯುಷ್ಯದಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ಸುಮಂಗಲಿಯಾಗಿ ನಮ್ಮನ್ನೆಲ್ಲಾ ಅಗಲಿದ ನಿಮಗೆ ನಮ್ಮೆಲ್ಲರ ಬಾಷ್ಪಾಂಜಲಿ. ನಿಮ್ಮ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಅಣ್ಣನಿಗೆ, ಮಕ್ಕಳಿಗೆಲ್ಲಾ ಈ ನೋವನ್ನು ಸಹಿಸುವ ಶಕ್ತಿಯನ್ನು ದೇವರು ಕರುಣಿಸಲಿ.

ನಿಮ್ಮ ನಾದಿನಿ,

**ಸ್ನೇಹಲತಾ ದಿವಾಕರ್,** ಮಂಗಳೂರು

## ಶಿವಬ್ರಾಹ್ಮಣ ಸಭಾ, ಕಾಸರಗೋಡು – ಸ್ಪಷ್ಟೀಕರಣ

ಶಿವಬ್ರಾಹ್ಮಣ ಸಭಾದ ಕಾರ್ಯಕಾರಿ ಸಮಿತಿ ಸಭೆಯು ಇತ್ತೀಚೆಗೆ ಶ್ರೀಯುತ ಮುರಳೀಧರ ಕಾಸರಗೋಡು ಇವರ ಮನೆಯಲ್ಲಿ ಜರಗಿತು. ತಾರೀಕು 19-10-2014ರಂದು ನಡೆಯಲಿರುವ ಜಿಲ್ಲಾ ಸಮಾವೇಶದ ಬಗ್ಗೆ ಚರ್ಚಿಸಲಾಯಿತು. ಮಾತ್ರವಲ್ಲದೆ ಸಂಘಟನೆಯ ಬಗ್ಗೆ ಒಂದು ಪತ್ರಿಕಾ ಸ್ಪಷ್ಟೀಕರಣವನ್ನು ನೀಡಲು ತೀರ್ಮಾನಿಸಲಾಯಿತು.

"ಕಾಸರಗೋಡಿನಲ್ಲಿ ಪರಂಪರಾಗತರಾಗಿ ಸ್ಥಾನಿಕ ಯಾನೆ ಶಿವ ಬ್ರಾಹ್ಮಣ ಎಂದು ಕರೆಸಿಕೊಳ್ಳುವ ಬ್ರಾಹ್ಮಣ ವರ್ಗದವರು ಕುತ್ಯಾಳ ಗೋಪಾಲಕೃಷ್ಣ ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು "ಶಿವಬ್ರಾಹ್ಮಣ ಸಭಾ" ಎಂಬ ಸಂಸ್ಥೆಯನ್ನು ರೂಪಿಸಿಕೊಂಡು ಕಾರ್ಯಪ್ರವರ್ತಿಸಿಕೊಂಡು ಬರುತ್ತಿದ್ದೇವೆ. ನಮ್ಮದು "ಅಖಿಲ ಭಾರತ ಸ್ಥಾನಿಕ ಮಹಾಮಂಡಲ" ಎಂಬ ಸಂಸ್ಥೆಯ ಅಂಗಸಂಸ್ಥೆಯಾಗಿದ್ದು ಇದರಲ್ಲಿ ಬೇರೆ ಯಾವುದೇ ವರ್ಗದ ಬ್ರಾಹ್ಮಣರಿಗೂ, ಜಾತಿಯವರಿಗೂ ಅಂಗತ್ವವನ್ನು ನೀಡಲಾಗಿಲ್ಲ. ಇದೀಗ ಕಾಸರಗೋಡಿನಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘ ಎಂಬ ಒಂದು ಸಂಘಟನೆಯು ಉದಯವಾದುದು ಪತ್ರಿಕೆಗಳ ಸುದ್ದಿಯಲ್ಲಿ ಬಂದಿರುತ್ತದೆ. ಕಾಸರಗೋಡಿನ "ಶಿವ ಬ್ರಾಹ್ಮಣ ಸಭಾ"ಕ್ಕೂ ಈ ಸಂಸ್ಥೆಗೂ ಯಾವುದೇ ರೀತಿಯಲ್ಲಿಯೂ ಸಂಬಂಧವಿಲ್ಲ. ಕಾಸರಗೋಡಿನ ಜಿಲ್ಲೆಯ ಶಿವಬ್ರಾಹ್ಮಣ/ಸ್ಥಾನಿಕ ಬ್ರಾಹ್ಮಣ ವರ್ಗದವರೂ ಯಾರೂ ಈ ಹೊಸ ಸಂಸ್ಥೆಯಲ್ಲಿ ಪದಾಧಿಕಾರಿಗಳಾಗಿಲ್ಲ. ಸ್ಥಾನಿಕ ಬ್ರಾಹ್ಮಣ ಸಂಘ ಎಂದು ಉದಯವಾದ ಹೊಸ ಸಂಸ್ಥೆಯು ಶಿವ ಬ್ರಾಹ್ಮಣರಿಗೆ ಸಂಬಂಧಪಟ್ಟದ್ದಲ್ಲ. ಸಾರ್ವಜನಿಕರಿಗೆ ತಪ್ಪು ಕಲ್ಪನೆಗೆ ಅವಕಾಶವಿರುವುದರಿಂದ ಸ್ಪಷ್ಟೀಕರಣವನ್ನು ನೀಡುತ್ತಿದ್ದೇವೆ".

ಸಭೆಯ ಅಧ್ಯಕ್ಷತೆಯನ್ನು ಡಾ. ಸತ್ಯನಾಥ ವಹಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಮನೋಹರ ವಂದಿಸಿದರು.


Manish Rao U.

Tel : (O) 2223301
Mobile : 9448726499 / 8884284939

NAVA COMPUTER



Dealers in : Computers Hardware and Peripherals
Computer Sales & Services

Alvares Centre, N.H. 17, Nanthoor, Mangalore - 575 005

Prop. : Kishore Kumar Kedige
Ph. : 2231524
M. : 9880726325



KYADIGE AUTOMOBILES

Opp. to D. P. Stores Main Road, B. C. Road, Bantwal Tq.

Dealers in : 2 & 3 WHEELERS SPARES



ಪತ್ರಿಕೆಗೆ ಶುಭ ಹಾರೈಸುವ-

ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಸುರತ್ಕಲ್, ಮಂಗಳೂರು

ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

PRAVEEN KUMAR ADYAPADY
ADVOCATE

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles,
A.C., D.C. Cases, Land Conversion, Registration etc.

Prop. : P. Srikanth Rao
Mobile : 9343361618

M/s. SAMARPAN

HOUSE OF STATIONERY

"Vijaya Nivas", Opp. Pio Mall
Bejai Church Road, Mangalore - 4






ಹೋಮಿಯೋಪತಿ ಹಾಗೂ
ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.
ಡಾ. ಸುಶೀಲ ರಾವ್, ಬಿ.ಎಚ್.ಎಮ್.ಎಸ್.
ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್
ಸ್ಪರ್ಶ ಮೆಡಿಕಲ್ ಸೆಂಟರ್
ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2
ದೂರವಾಣಿ : 0824-4276666 ಮೊಬೈಲ್ : 9844063805

ಪ್ರವಾಸ ಕಥನ

# ಈಜಿಪ್ಟ್ ಪ್ರವಾಸ



ತಾರೀಕು 7-10-2014ರಂದು ಸಾಯಂಕಾಲ ಮಂಗಳೂರು ಬಜಪೆ ವಿಮಾನ ನಿಲ್ದಾಣದಿಂದ ಬೆಂಗಳೂರು, ಅಲ್ಲಿಂದ ದೋಹಾ ಅಲ್ಲಿಂದ ಈಜಿಪ್ಟ್‌ನ ಕೈರೊಗೆ ರಿಯಾ ಟ್ರಾವೆಲ್ಸ್‌ರವರ ಇಬ್ಬರು ಗೈಡ್‌ಗಳನ್ನು ಸೇರಿಸಿ 18 ಮಂದಿ ಲಯನ್ಸ್ ಸದಸ್ಯರ ಗುಂಪು ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾದ ಪಿರಮಿಡ್ ಇರುವ ಈಜಿಪ್ಟ್ ದೇಶವನ್ನು ಸಂದರ್ಶಿಸಲು ಹೊರಟಿತು. ಮಂಗಳೂರಿನಿಂದ 4857 K.M. ಪ್ರಯಾಣ. ದೋಹಾದಿಂದ 450 ಮಂದಿ ಪ್ರಯಾಣಿಸಬಹುದಾದ ಕತಾರ್ Airlinesನಲ್ಲಿ ಎರಡೂವರೆ ಘಂಟೆ



ಪ್ರಯಾಣಿಸಿ ಕೈರೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದೆವು. ಆ ದಿನ ವಿಶ್ರಾಂತಿ ಪಡೆದು ಮರುದಿನ ಸಣ್ಣ ಎ.ಸಿ. ಬಸ್ಸಿನಲ್ಲಿ ಪಿರಮಿಡ್ ಮತ್ತು ಮ್ಯೂಸಿಯಂ ನೋಡಲು ಹೊರಟೆವು. ಅಲ್ಲಿ ಹಲವಾರು ಪಿರಮಿಡ್‌ಗಳಿವೆ. ಅತಿ ಎತ್ತರದ ಪಿರಮಿಡ್‌ನ ಎತ್ತರ 146.5 ಮೀಟರ್ ಮತ್ತು Base 230.4 ಮೀಟರ್. 5 ಸಾವಿರ ವರ್ಷಗಳಷ್ಟು ಹಳೆಯದು. ಅತೀ ದೊಡ್ಡ ದೊಡ್ಡ Lime stoneನಿಂದ ಪಿರಮಿಡ್ಡನ್ನು ನಿರ್ಮಿಸಿರುತ್ತಾರೆ. ಅದರ ಒಳಗೆ ಹೋಗಲು ಬಾಗಿಲುಗಳಿವೆ. ಅದರ ಒಳಗೆ ರಾಜರ ಮಮ್ಮಿಗಳಿವೆ. ಬಳಿಕ ಟಿಕೆಟ್ ಪಡೆದು ಮ್ಯೂಸಿಯಂ ನೋಡಲು ಹೊರಟೆವು. ಅಲ್ಲಿನ ರಾಜರ, ರಾಣಿಯರ, ಅವರ ಮಕ್ಕಳ, ಮೊಮ್ಮಕ್ಕಳ ಎಲ್ಲರ ಹೆಣಗಳನ್ನು ಮಮ್ಮಿ ಮಾಡಿ ಇಟ್ಟಿರುತ್ತಾರೆ. ಸಾವಿರಾರು ವರ್ಷಗಳ ಹಳೆಯ ಹೆಣಗಳಿವೆ. ಅದರ ಬಳಿಯಲ್ಲಿ ಅವರು ಉಪಯೋಗಿಸುತ್ತಿದ್ದ ಎಲ್ಲಾ ವಸ್ತುಗಳು, ಆಭರಣಗಳು, ಚಪ್ಪಲಿಯಿಂದ ಹಿಡಿದು ಎಲ್ಲವೂ ಇದೆ. ಅಲ್ಲಿನ ರಾಜರು ಅವರ ಪರಿವಾರದವರು ಸತ್ತ ಬಳಿಕ ಅವರ ದೇಹವನ್ನು ಮಮ್ಮಿ ಮಾಡಿ ಇಟ್ಟಿರುತ್ತಾರೆ. ಮಮ್ಮಿ ಅಂದರೆ ಸತ್ತ ವ್ಯಕ್ತಿಯ ರಕ್ತ ಮತ್ತು ಮಾಂಸವನ್ನು ತೆಗೆದು ಅವರ ಎಲುಬಿಗೆ ಅವರ ಚರ್ಮವನ್ನೇ ಹೊದಿಸಿ ಕೆಮಿಕಲ್ಸ್ ಹಾಕಿ ಹಾಳಾಗದಂತೆ ಹಾಗೆ ಇಟ್ಟಿರುತ್ತಾರೆ. 4, 5 ಸಾವಿರ ವರ್ಷಗಳ ಹಳೆಯ ಮಮ್ಮಿಗಳು ಇವೆ. ಅವರ ಮ್ಯೂಸಿಯಂನಲ್ಲಿ 3 ಸಾವಿರ ಮೊಸಳೆಗಳನ್ನೂ ಮಮ್ಮಿ ಮಾಡಿ ಇಟ್ಟಿರುತ್ತಾರೆ.

ಇದು 1001,450 Square KM ವಿಸ್ತೀರ್ಣತೆಯನ್ನು ಮರುಭೂಮಿಯನ್ನು ಹೊಂದಿದೆ. ಅಲ್ಲಿಯ ಹಣ ಈಜಿಪ್ಟ್ ಶಿಯರ್ ಪೌಂಡು. ಅವರ 100 ಪೌಂಡು ಬೇಕಾದರೆ ನಮ್ಮ 863-16 ರೂಪ್ಯಾ ನೀಡಬೇಕು. 80% ಮುಸಲ್ಮಾನರು, 20% ಇತರ ಧರ್ಮೀಯರಿದ್ದಾರೆ. ಚರ್ಚ್‌ಗಳು ಕಾಣಸಿಕ್ಕಿದವು. ಎಲ್ಲೂ ಹಿಂದೂ ದೇವಸ್ಥಾನಗಳು ಕಾಣಸಿಗಲಿಲ್ಲ. 8.3 ಲಕ್ಷ ಜನಸಂಖ್ಯೆ. ಮರುಭೂಮಿ ಆದರೂ ಅದ್ಭುತ ಗಗನಚುಂಬಿ ಕಟ್ಟಡಗಳಿವೆ. ಆ ದಿನ ರಾತ್ರಿ ನಾವು ಹೋಟೆಲ್ MEREDIENನಲ್ಲಿ ವಿಶ್ರಾಂತಿ ಪಡೆದೆವು.

ಮರುದಿನ 7-00 ಗಂಟೆಗೆ ಉಪಾಹಾರ ಮುಗಿಸಿ Aswan Cityಗೆ ದೇಶೀಯ ವಿಮಾನದಲ್ಲಿ ಒಂದೂವರೆ ಗಂಟೆ ಪ್ರಯಾಣ. ದಾರಿಯಲ್ಲಿ ನೈಲ್ ನದಿ ಒಳಹರಿವಿನ ಅಣೆಕಟ್ಟಿನ ವೀಕ್ಷಣೆ ಮರುಭೂಮಿಯಾದ ಆ ದೇಶಕ್ಕೆ ನೈಲ್ ನದಿ ಒಂದು ವರಪ್ರಸಾದ. ಅದಕ್ಕೆ ಅಣೆಕಟ್ಟನ್ನು ಕಟ್ಟಿ ಅಲ್ಲಲ್ಲಿ ತೆರೆವ ಬಾಗಿಲುಗಳನ್ನು ನಿರ್ಮಿಸಿ ನೂರಾರು ಹಡಗುಗಳನ್ನು ಇಟ್ಟು ಪ್ರವಾಸಿಗರನ್ನು ಆಕರ್ಷಿಸಿ ಅವರ ದೇಶವನ್ನು ಸಮೃದ್ಧಗೊಳಿಸಿರುತ್ತಾರೆ. ರಾತ್ರಿ ನಮಗೆ "Royal Esadora" ಎಂಬ ದೊಡ್ಡ ಹಡಗಿನಲ್ಲಿ ಊಟ ವಿಶ್ರಾಂತಿ. ಅದರ ಕೆಳಅಂತಸ್ತಿನಲ್ಲಿ 5 Star ಮಾದರಿ ಹೋಟೆಲ್ ರೀತಿ ಊಟ ಉಪಚಾರ. ಮೇಲಂತಸ್ತಿನಲ್ಲಿ ವಿಶ್ರಾಂತಿ ಕೊಠಡಿಗಳು ಬಹಳ ಸುಂದರವಾಗಿವೆ. ನಡುವಿನಲ್ಲಿ ಅಂಗಡಿಗಳು, ಹಣ ಬದಲಾವಣೆ ಕೇಂದ್ರಗಳು, ಅದರ ಮೇಲೆ ನೃತ್ಯ ಆಡಿಟೋರಿಯಂ, ಅದರ ಮೇಲೆ ಗಾರ್ಡನ್, ಈಜುಕೊಳ, ವಿಶ್ರಾಂತಿ ಮಂಚ ಮತ್ತು ಹಾಸಿಗೆಗಳು. ರಾತ್ರಿ ಊಟದ ಬಳಿಕ ಅಲ್ಲಿಯ ಬ್ಯಾಲೆ ಮತ್ತು ಬೆಳ್ಳಿ ನೃತ್ಯವನ್ನು ಪುರುಷ ಮತ್ತು ಸ್ತ್ರೀ ಒಬ್ಬಳು ಮಾಡುತ್ತಾರೆ. ಬಹಳ ಸೊಗಸಾದ ನೃತ್ಯ. ಬಳಿಕ ರೂಮ್‌ನಲ್ಲಿ ತಂಗಿದ್ದ ಹಲವಾರು ವಿದೇಶೀಯರು ಆ ಸ್ತ್ರೀಯ ಜೊತೆಗೆ ನರ್ತಿಸಿದರು. ನಾವು ತಂಗಿದ್ದ ಹಡಗಿನಲ್ಲಿ ಹಲವಾರು U.K. ಮತ್ತು ಜರ್ಮನಿಯ ಪ್ರವಾಸಿಗರಿದ್ದರು. ನಮಗೆ ಮೂರು ದಿನ ಅದೇ ಹಡಗಿನಲ್ಲಿ ತಂಗುವಿಕೆ, ಹಗಲು ಇಡೀ ಹಡಗು ಪ್ರಯಾಣಿಸುತ್ತದೆ. ರಾತ್ರಿ 8 ಗಂಟೆಯ ಬಳಿಕ ವಿಶ್ರಾಂತಿ ಪಡೆಯುತ್ತದೆ. ನಾವೆಲ್ಲ ಸುತ್ತಲಿನ ಜಗಮಗಿಸುವ ದೃಶ್ಯಾವಳಿಯನ್ನು ವೀಕ್ಷಿಸಿ ಸಂತೋಷಗೊಂಡೆವು.

ಮರುದಿನ ಬೆಳಗ್ಗೆ ಕುದುರೆಗಾಡಿಯಲ್ಲಿ ಒಂದೂವರೆ ಗಂಟೆ ಸುತ್ತಲಿನ ಸಂದರ್ಶನ. ಎಲ್ಲೆಲ್ಲೂ ಖರ್ಜೂರ ಗಿಡಗಳು ಕಾಣಸಿಗುತ್ತವೆ. ಬಳಿಕ ಸಣ್ಣ ದೋಣಿಯಲ್ಲಿ ಎಲ್ಲರೂ ಹಾಡುತ್ತಾ ನರ್ತಿಸುತ್ತಾ ನದಿಯ ಬದಿಯ ಚಾರಿತ್ರಿಕ ಸ್ಥಳಗಳ ವೀಕ್ಷಣೆ.

ನಮ್ಮ ದೇವಸ್ಥಾನ ಎದುರು ಧ್ವಜಸ್ತಂಭವಿರುವಂತೆ ಅಲ್ಲಿಯೂ ಒಂದೇ ಕಲ್ಲಿನ ಅತೀ ಎತ್ತರ ಸ್ತಂಭಗಳಿವೆ. ಅದರಲ್ಲಿ ಬಹಳ ಸುಂದರ ಕೆತ್ತನೆಗಳನ್ನು ಮಾಡಿರುತ್ತಾರೆ. ಭೂಕಂಪದ ಬಳಿಕ ಅವರ ಹಲವಾರು ಕಟ್ಟಡಗಳು ಹಾನಿಯಾಗಿವೆ. ಆದರೂ ಈಗಲೂ ಬಹಳಷ್ಟು ಸುಂದರವಾದ ರಾಜರ ಅರಮನೆಗಳಿವೆ. ಅವರು ಅರಮನೆಗಳಿಗೆ Temple ಎನ್ನುತ್ತಾರೆ. 3 ಸಾವಿರ ವರ್ಷಗಳ ಹಿಂದಿನ ಅವರ ಜೀವನಶೈಲಿ, ವೈದ್ಯಕೀಯ ರೀತಿ ಎಲ್ಲವನ್ನು ಬೃಹದಾಕಾರದ ಕಲ್ಲಿನಲ್ಲಿ ಕೆತ್ತಿದ ಚಿತ್ರಗಳಿವೆ.

ಅಲ್ಲಿನ ಸ್ತ್ರೀಯರು ಬಹಳ ಸುಂದರವಾಗಿದ್ದಾರೆ. ಊಟದಲ್ಲಿ ಎಲ್ಲೂ, ಕಾಯಿ ಮೆಣಸಾಗಲಿ, ಕೆಂಪು ಮೆಣಸಾಗಲಿ ಇಲ್ಲ. ಖರ್ಜೂರ ಮತ್ತು ಒಳ್ಳೆಮೆಣಸಿನ ಉಪಯೋಗ ಜಾಸ್ತಿ. ಪಪ್ಪಾಯ ಎಂಬ ಗಿಡದಿಂದ ಪೇಪರ್ ತಯಾರಿಸಿ ಅದರಲ್ಲಿ ಸುಂದರವಾದ ಚಿತ್ರಗಳನ್ನು ನಿರ್ಮಿಸಿ ಮಾರಾಟ ಮಾಡುತ್ತಾರೆ. Edfu Temple ಎನ್ನುವ ಅರಮನೆ ಸಂದರ್ಶನ. ಆಮೇಲೆ Esna ಎಂಬ ಸ್ಥಳದಲ್ಲಿ ನಮ್ಮ ಹಡಗು ತಂಗಿತು.

ತಾರೀಕು 13-10-2014ರಂದು Laxorಗೆ ಪ್ರಯಾಣ. ಪರಜೇಸ್ ಎಂಬ 98 ವರ್ಷ ಬದುಕಿದ್ದ ರಾಜನ ಅರಮನೆ 4 ಸಾವಿರ ವರ್ಷಗಳಷ್ಟು ಹಳೆಯದು. ಈಗಲೂ ಆತನ ಶವ ಮಮ್ಮಿಯಾಗಿ ಮ್ಯೂಸಿಯಂನಲ್ಲಿ ಇದೆ. ಆತನು 80 ಮದುವೆ ಆಗಿದ್ದಾನಂತೆ. ಇಬ್ಬರು ಆತನ ಸುಂದರಿಯಾದ ಪುತ್ರಿಯರನ್ನೂ ಆತನೇ ವಿವಾಹವಾಗಿದ್ದಾನಂತೆ. ಅವನಿಗೆ 220 ಮೊಮ್ಮಕ್ಕಳು ಇದ್ದರಂತೆ. ಬಹಳ ದೊಡ್ಡ ದೊಡ್ಡ ಕೆತ್ತನೆಯ ಕಂಬಗಳು, ಮೇಲ್‌ಚಾವಣಿಗಳು ನಮ್ಮ ರಾಮೇಶ್ವರ ದೇವಸ್ಥಾನವನ್ನು ನೆನಪಿಸುತ್ತದೆ. GIZA PYRAMIDS ಮುಂತಾದ ಹಲವಾರು ಪಿರಮಿಡ್‌ಗಳನ್ನು ಟಿಕೇಟ್ ಖರೀದಿಸಿ ನೋಡಬೇಕು.

ತಾರೀಕು 14-10-2014ರಂದು Laxor ಅಂತಾರಾಷ್ಟ್ರೀಯ ವಿಮಾಣ ನಿಲ್ದಾಣದಿಂದ ಹೊರಟು ದೋಹಾದಿಂದ ಬೆಂಗಳೂರಿಗಾಗಿ ಮಂಗಳೂರಿಗೆ ಸುಖವಾಗಿ ತಲುಪಿದೆವು. ಸುಂದರ ಪ್ರವಾಸದ ಸಂತಸವು ಈಗಲೂ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಆಗಾಗ ನೆನಪಿಗೆ ಬರುತ್ತದೆ.

*ಶ್ರೀಮತಿ ಕನಕವಲ್ಲಿ ಹರ್ಷ ಕುಮಾರ್*



# ಸುಬ್ರಹ್ಮಣ್ಯ ಸೇವಾ ಸಂಘದ ಅಮೃತ ಮಹೋತ್ಸವಾಚರಣೆ




**ಮುಂಬಯಿ :** ಸುಬ್ರಹ್ಮಣ್ಯ ಸೇವಾ ಸಂಘ ಮುಂಬಯಿಯ ಅಮೃತ ಮಹೋತ್ಸವ ಆಚರಣೆ ಸಯಾನ್ ಪೂರ್ವದಲ್ಲಿನ ಗೋಕುಲದ ಗೀತಾ ಗೋವಿಂದ ಸಭಾ ಗೃಹದಲ್ಲಿ ಸಂಭ್ರಮದಿಂದ ಜರುಗಿತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆಡಳಿತ ನಿರ್ದೇಶಕ ಶ್ರೀ ಪಿ. ಪ್ರದೀಪ್ ಕುಮಾರ್ ಚಾಲನೆ ನೀಡಿದರು.

ನಂತರ ಶ್ರೀ ಸದಾಶಿವ ರಾವ್ ನೇತೃತ್ವದಲ್ಲಿ ಸಂಘದ ಚಟುವಟಿಕೆಗಳಲ್ಲಿ ಯುವ ಜನಾಂಗದ ಪಾತ್ರ, ನಮ್ಮ ಸಂಸ್ಕೃತಿಯನ್ನು ಉಳಿಸುವಲ್ಲಿ, ಶಿಕ್ಷಣ, ಉದ್ಯೋಗ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಸಮಾಜ ಬಾಂಧವರು ಎದುರಿಸುವ ಸಮಸ್ಯೆಗಳಲ್ಲಿ ಸಂಘದ ಪಾತ್ರ, ತಾಯ್ನಾಡಿನ ದೇವಾಲಯಗಳ ಜೀರ್ಣೋದ್ಧಾರ, ಪೌರೋಹಿತ್ಯ ಮುಂತಾದ ಅನೇಕ ಸಮಸ್ಯೆಗಳ ಬಗ್ಗೆ ನೆರೆದ ಸಮಾಜ ಬಾಂಧವರೊಡನೆ ನೇರ ಪ್ರಶ್ನೋತ್ತರ, ವಿಚಾರ ಸಂಕಿರಣ ಕಾರ್ಯಕ್ರಮ ನಡೆಸಲಾಯಿತು.

ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಡಾ. ಯಾಜಿ ನಿರಂಜನ್ ಭಟ್, ಕರುಣಾಕರ ಬೆಳ್ಳೆ, ಸಬಿತ ರಾವ್, ಕುಕ್ಕಿಕಟ್ಟೆ ಭೋಜ ರಾವ್ ಮುಂತಾದ ಗಣ್ಯರು ಪ್ರಶ್ನೆಗಳಿಗೆ ಉತ್ತರಿಸಿದರು.

ಸಂಘದ ಅಧ್ಯಕ್ಷ ಎ. ಎಸ್. ರಾವ್ ಅಧ್ಯಕ್ಷತೆಯಲ್ಲಿ ಸಮಾರೋಪ ಸಭಾ ಕಾರ್ಯಕ್ರಮ ಜರುಗಿದ್ದು, ಅಮೃತ ಮಹೋತ್ಸವದ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀ, ಡಾ. ಯಾಜಿ ನಿರಂಜನ್ ಭಟ್, ಎಂ. ಫಾಲಚಂದ್ರ ರಾವ್, ಕುಕ್ಕಿಕಟ್ಟೆ ಭೋಜ ರಾವ್, ಸಬಿತಾ ಎಸ್. ರಾವ್, ಕರುಣಾಕರ ರಾವ್ ಬೆಳ್ಳೆ ಹಾಗೂ ಮುಖ್ಯ ಅತಿಥಿ ಪ್ರದೀಪ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮುಂಬಯಿಯಲ್ಲಿ ನೆಲೆಸಿರುವ ಗಣ್ಯ ಸಮಾಜ ಬಾಂಧವರಿಗೆ ಹಾಗೂ ಸಂಘಕ್ಕೆ ನಿಸ್ವಾರ್ಥ ಸೇವೆಗೈದ ಬಿ.ವಿ. ರಾವ್, ಐ.ಜೆ. ರಾವ್, ಡಾ. ಪಿ.ಜಿ. ರಾವ್, ಡಾ. ಎಂ. ಆರ್. ಲೋಕೇಶ್ವರ್, ಶೈಲಜಾ ಮಧುಸೂದನ್, ಭಾರತಿ ಎಸ್. ರಾವ್, ಕುಮುದಿನಿ ಎಲ್. ರಾವ್, ಬಿ. ಬಾಲಚಂದ್ರ ರಾವ್, ಕೆ. ಸುಬ್ಬಣ್ಣ ರಾವ್, ಪಿ. ಉಮೇಶ್ ರಾವ್, ಬಿ. ವಿಜಯ ಕುಮಾರ್ ರಾವ್ ಮತ್ತು ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ, ಕುಂಭಾಶಿ, ಸುಬ್ರಹ್ಮಣ್ಯ ಸಭಾ ಮಂಗಳೂರು, ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ ಮೂಡುಬಿದಿರೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಭಾ ಉಡುಪಿ, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು ಮೊದಲಾದ ಸಂಸ್ಥೆಗಳನ್ನು ಗೌರವಿಸಲಾಯಿತು.

ಅಮೃತ ಮಹೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಕೆ. ಸುಬ್ಬಣ್ಣ ರಾವ್, ಕಾರ್ಯದರ್ಶಿ ಸದಾಶಿವ್ ರಾವ್ ಉಪಸ್ಥಿತರಿದ್ದು, ಲಕ್ಷ್ಮೀ ರಾವ್ ಪ್ರಾರ್ಥನೆ ಹಾಡಿದರು. ಎ. ಎಸ್. ರಾವ್, ಅನುರಾಧಾ ರಾವ್, ಅಂಜನಾ ರಾವ್, ಚಂದ್ರಾವತಿ ರಾವ್ ಕಾರ್ಯಕ್ರಮ ನಿರೂಪಿಸಿದರು. ಮನೋಜ್ ರಾವ್ ವಂದಿಸಿದರು.

# ಮೂಡುಬಿದಿರೆ ಶ್ರೀ ಚಂದ್ರಶೇಖರ ದೇವಾಲಯದಲ್ಲಿ ಶಿವಪಂಚಾಕ್ಷರಿ ಕೋಟಿಜಪಯಜ್ಞ ಮತ್ತು ಶ್ರೀ ಮೃತ್ಯುಂಜಯ ಶಾಂತಿ ಹೋಮ

ಮೂಡುಬಿದಿರೆ : ಸ್ಥಳೀಯ ದೊಡ್ಡಮನೆ ಶ್ರೀ ಚಂದ್ರಶೇಖರ ದೇವಸ್ಥಾನದ ಭಜಕರ ಶ್ರೇಯೋಭಿವೃದ್ಧಿಗಾಗಿ ಶ್ರೀ ಶ್ರೀ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ ನವೆಂಬರ್ 29 ಹಾಗೂ 30ರಂದು ವಿವಿಧ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿತು.



ದಿನಾಂಕ 29ರಂದು ಮೂಡುಬಿದಿರೆ ಪೇಟೆಯ ಶ್ರೀ ಆಂಜನೇಯ ದೇವಸ್ಥಾನದ ಪ್ರಸಾದದೊಂದಿಗೆ ಹೊರಟ ಕಲಶ ಸಹಿತ ಮೆರವಣಿಗೆಯಲ್ಲಿ ಹಸಿರುವಾಣಿ ಹೊರೆಕಾಣಿಕೆ ಹಾಗೂ ಮೂಡುಬಿದಿರೆ ಶ್ರೀಮತಿ ಸುಜಾತಾ ಮನೋಹರ ಕುಟುಂಬಸ್ಥರು ನೀಡಿದ ರಜತ ಪ್ರಭಾವಳಿ, ಮುಂಬೈ ಸ್ಥಿತ ಶ್ರೀರಂಗಪಟ್ಟಣದ ಶ್ರೀಮತಿ ಶಂಕರಿ ಮೋಹನ ರಾವ್ ಮತ್ತು ಮಕ್ಕಳು ನೀಡಿದ ಚಿನ್ನಲೇಪಿತ ರಜತ ಪುಷ್ಪಹಾರ, ನಾಗಪ್ರತಿಮೆ ಹಾಗೂ ಶ್ರೀ ಸೀತಾರಾಮ ರಾವ್‌ರವರು ಒದಗಿಸಿದ ಪುಸ್ತಕದಲ್ಲಿ ಲಿಖಿತ ಪಂಚಾಕ್ಷರಿ ಮಂತ್ರದ ಪುಸ್ತಕಗಳನ್ನು ಭವ್ಯ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಹೊತ್ತು ತರಲಾಯಿತು.

ತಾರೀಕು 30ರಂದು ಬೆಳಗ್ಗೆ ಸ್ಥಾನಿಕ ಬಂಧುಗಳೊಂದಿಗೆ ಅರ್ಚಕ ಮೊಕ್ತೇಸರ ಶ್ರೀ ರತ್ನಾಕರ ರಾವ್‌ರವರ ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಮೃತ್ಯುಂಜಯ ಹೋಮ, ರುದ್ರಾಭಿಷೇಕ, ಸಾಮೂಹಿಕ ಬಿಲ್ವಾರ್ಚನೆ ಹಾಗೂ ಅಲಂಗಾರು ಶ್ರೀ ಚಂದ್ರಶೇಖರ ರಾವ್ ಹಾಗೂ ಶ್ರೀಮತಿ ಸುವಾ ರಾಜಕುವಾರ್‌ರವರು ಒದಗಿಸಿದ ಅನ್ನಪ್ರಸಾದ ಸಂತರ್ಪಣೆಯನ್ನು ಪೂರೈಸಿದರು. ಮಧ್ಯಾಹ್ನದ ತರುವಾಯ ಸ್ಥಳೀಯ ಶ್ರೀ ವೆಂಕಟರಮಣ ಭಜನಾ ಮಂಡಳಿ ಹಾಗೂ ಶ್ರೀ ಕಾಳಿಕಾಂಬಾ ಭಜನಾ ಮಂಡಳಿಯ ಸದಸ್ಯರಿಂದ ಭಜನೆ ಕಾರ್ಯಕ್ರಮ ಹಾಗೂ ರಂಗಪೂಜೆಗೆ ಶ್ರೀ ಚಂದ್ರಶೇಖರ ರಾವ್‌ರವರು ನೀಡಿದ ದೀಪಾವಳಿಯಲ್ಲಿ ಬಹಳ ವೈಭವಯುತ ವಾಗಿ ಭಗವದ್ಭಕ್ತರ ಸಹಕಾರದೊಂದಿಗೆ ಜರುಗಿತು.

**ಫೋಟೋ ಸಹಿತ ವರದಿ :**
**ರಾಯೀ ರಾಜಕುಮಾರ್,** ಮೂಡುಬಿದಿರೆ

The RIGHT Place for the Right Customer
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಹೆಬ್ಬಾರ್ ಎಂಟರ್‌ಪ್ರೈಸಸ್
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

PREETHIKA AUTOMOBILES
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
ಪ್ರಮೋದ್ ಟವರ್ಸ್, ಮಂಗಳೂರು

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works

PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟಾರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
LIC
ಸಂಪರ್ಕಿಸಿರಿ :
ಪಿ. ರಾಜೇಂದ್ರ ರಾವ್, ಬಿ.ಎಸ್ಸಿ.
ಕುಂಜತ್ತಬೈಲ್, ಮಂಗಳೂರು, ಮೊ. : 9242214842

Prakash Rao
Mob : 8453679734, 9986071684
KRISHNA ELECTRONICS
Dealers in :
Electronic Spares & T.V., VCD, DVD etc Service Centre,
Car Cds, Speaker, Sub Woofers, USB Players C.C. Camers
Opp. Service Bus Stand, Rao & Rao Circle, City Towers
MANGALORE - 575 003

ಸಿ. ಯಂ. ರಾವ್ ಕಟಪಾಡಿ
ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು
ಶ್ರೀ ಮುರಳೀಧರ ರಾವ್
'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105
ಮೊಬೈಲ್ : 9741816166
ತಪ್ಪದೆ ವೀಕ್ಷಿಸಿ : ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'
ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು
ಚಂದಾ ದರ
ಮಹಾ ಪೋಷಕರು – ರೂ. 10,000/–
ಪೋಷಕರು – ರೂ. 5,000/– * ಆಜೀವ ಚಂದಾ ದರ – ರೂ. 500/–

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

### ವಿವಾಹಪೂರ್ವ ಆಚರಣೆಗಳು

**Naandi :** Several days before the wedding, a morning prayer is done to seek Gods' and ancestors' permission for the wedding. A 'mangala snana' (holy bath) is given to the bride and groom in their respective houses after rubbing their body with oil and turmeric.



ನಾಂದಿ :

देवकार्यादपि मुने पितृकार्यं विशिष्यते देवतानां हि पितरः पूर्वमाप्यायनं स्मृतं ॥

ದೇವತಾಕಾರ್ಯಕ್ಕಿಂತಲೂ ಪಿತೃಕಾರ್ಯದಲ್ಲಿ ವಿಶೇಷತೆಯಿದೆ. ದೇವಕಾರ್ಯಕ್ಕೂ ಮೊದಲು ಪಿತೃಕಾರ್ಯ ನಡೆಯಬೇಕು ಎಂಬುದು ಹರಿವಂಶದ ಮಾತು.

ದೇವತೆಗಳಿಂದಲೂ ಪೂಜ್ಯರಾದ ಪಿತೃದೇವತೆಗಳನ್ನು ವಧೂವರರ ಮನೆಯಲ್ಲಿ ಆರಾಧಿಸುವ ವಿಶಿಷ್ಟ ಸಂಪ್ರದಾಯವಿದು.

## ಚಿಣ್ಣರ ಆರ್ಟ್ ಗ್ಯಾಲರಿ





ಶರಣ್ಯ ಎಸ್. ರಾವ್
ಎಲ್.ಕೆ.ಜಿ.



ರಮ್ಯಶ್ರೀ, 6ನೇ ತರಗತಿ
ಸೈಂಟ್ ಆ್ಯನ್ಸ್ ಸ್ಕೂಲ್, ಕಡಬ



ಕೃಪಾಲ್
4ನೇ ತರಗತಿ



ಅನುಜ್ಞಾ
ಶ್ರೀದೇವಿ ನರ್ಸರಿ ಸ್ಕೂಲ್, ಕಿನ್ನಿಗೋಳಿ

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ. **ನಮ್ಮ ವಿಳಾಸ : ಅಂಚೆ ಪೆಟ್ಟಿಗೆ ನಂ. 206, ದರ್ಬೆ – 574 202, ಪುತ್ತೂರು, ದ. ಕ.**




## ಜ್ಞಾನ – ನುಡಿ

ನಿರಾಶಾವಾದಿಯಾದವನು ಎಲ್ಲ ಅವಕಾಶಗಳಲ್ಲೂ ಕಷ್ಟಗಳನ್ನೆ ಹುಡುಕುತ್ತಾನೆ.
ಆಶಾವಾದಿಯಾದವನು ಎಲ್ಲ ಕಷ್ಟಗಳಲ್ಲೂ ಅವಕಾಶಗಳನ್ನೇ ಹುಡುಕುತ್ತಾನೆ.

*–ವಿನ್‌ಸ್ಟನ್ ಚರ್ಚಿಲ್*

## ಜ್ಞಾನ – ನಗೆ

**ಪ್ರಶ್ನೆ :** ಒಂದು ವೇಳೆ ನಿನ್ನ ಅತ್ತೆ ಮತ್ತು ಹೆಂಡ್ತಿ ಮೇಲೆ ಹುಲಿ ದಾಳಿ ಮಾಡಿದರೆ ಯಾರನ್ನು ಉಳಿಸುವೆ?

**ಉತ್ತರ :** ಖಂಡಿತವಾಗಿಯೂ ಹುಲಿಯನ್ನೆ. ಏಕೆಂದರೆ ಹುಲಿ ಸಂತತಿ ಅಳಿವಿನಂಚಿನಲ್ಲಿದೆ!

## ಜ್ಞಾನ – ಗಾದೆ

ಕುರುಡೆಲಾ ಕುಂಟೆಲಾ ಸಂತೆಗ್ ಪೋಯಿಲೆಕ್ಕ
ಕುರುಡೆರ್ನ ರಾಜ್ಯಡ್ ಒಂಜಿ ಕಣ್ಣ್‌ತ್ನಾಯೆನೇ ರಾಜೆ
ಕೋಟಿ ಪುಣ್ಯವಂತನ್ಲಾ ಕಡೇಕ್ ಪೊತ್ತಾವುನೇ

## ಜ್ಞಾನ – ವಿಸ್ಮಯ

ನಾರ್ವೆಯಲ್ಲಿ ಕೈದಿಗಳಿಂದಾಗಿ ಜೈಲು ತುಂಬಿತುಳುಕುತ್ತಿದ್ದು, ನೆದರ್ಲೆಂಡ್‌ಗೆ ಜೈಲನ್ನು ಬಾಡಿಗೆಗೆ ನೀಡುವಂತೆ ಮನವಿ ಮಾಡಿದೆಯಂತೆ. ನೆದರ್ಲೆಂಡ್ ಜೈಲುಗಳನ್ನು ಈಗಾಗಲೇ ತನ್ನ ನೆರೆಯ ಬೆಲ್ಜಿಯಂ ದೇಶಕ್ಕೆ ಬಾಡಿಗೆಗೆ ನೀಡಿದ್ದು ದೂರದ ನಾರ್ವೆಯ ಮನವಿಯನ್ನು ಕೈಬಿಡುವ ಸೂಚನೆ ಇದೆಯಂತೆ!



*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*